ಮೈಸೂರ ಗೆಜಿಟ್ಟು.

ನಂ. 42 ಸರ್ಕಾರದಿಂದ ಫಾಯಿಷ್ ಆದ್ದು. ಸನ 1889.

ಬೆಂಗಳೂರು, ಶನಿವಾರ, ಅಕ್ಟೋಬರ್ ತಾ|| 19, ಸನ 1889.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ–ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ಸರ್ಕಾರದಿಂದ ಕೊಡೋಣವ ಇಸ್ತಿಹಾರ್‌ನಾಮೆಗಳು.

2ನೇ ಭಾಗ–ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರ್‌ಟೆಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫಿಸರ್‌ಗಳು, ಫಾರೆಸ್ಟು ಇನ್‌ಸ್ಪೆಕ್ಟರ್ ಜನರಲ್‌ಯವರು, ರೆವಿನ್ಯೂ ಕಮಿಷನರ್ ಇನ್‌ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟ್ ವ ಸೆಷನ್ ಜಡ್ಜ್‌ರು, ಡಿ|| ಪೆಮ್ಯುಟಿ ಕಮಿಷನರುಗಳು, ಸಬಾರ್ಡಿನೇಟ್ ಜಡ್ಜ್‌ರು, ಪೊಲೀಸ್ ಸೂಪರ್‌ಟೆಂಡೆಂಟರು, ಫಾರೆಸ್ಟು ಆಫಿಸರ್‌ಗಳು, ಇವರುಗಳಿಂದ ಕೊಡೋಣವ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫಿಸ್ ನೋಟಿಸುಗಳು.

3ನೇ ಭಾಗ–ಶ್ರೀಮತ್ ಮಹಾರಾಜ ರಾಜಾಸಾಹೆಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಅಕ್ಟುಗಳು ವ ರೆಗ್ಯುಲೇಷನ್‌ಗಳು—ಇಲ್ಲ.

4ನೇ ಭಾಗ–ಸರ್ಕಾರೀ ಕಾಗದ ಪತ್ರಗಳು—ಮೈಸೂರ ದಿವಾನರವರು ದಸರಾ ಹಬ್ಬದ ಸಭೆಯಲ್ಲಿ ಪ್ರಜಾ ಪ್ರತಿನಿಧಿಗಳಿಗೆ ತಿಳಿದ ಅಂಶಗಳು.

1ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೆಬ್ ಬಹದೂರವರ ಸರ್ಕಾರದಿಂದ ಕೊಡೋಣವ ಇಸ್ತಿಹಾರ್‌ನಾಮೆ.

ಜನರಲ್.

ಇಸ್ತಿಹಾರ್‌ನಾಮೆ.

ತಾರೀಖು 19ನೇ ಸೆಪ್ಟಂಬರ್ 1889.

ನಂ. 189.—ಸನ 1881ನೇ ಇಸವಿಯ ಎಕ್ಸೈಜ್ ಆಕ್ಟಿನ 3ನೇ ಸೆಕ್ಷನ್ ಅನುಸರಿಸಿ, ಶ್ರೀಮನ್ಮಹಾರಾಜಾ ಸರ್ಕಾರದವರು ಇದರಿಂದ ತಿಳಿಯಪಡಿಸುವದೇನಂದರೆ, (1883ನೇ ಇಸವಿಯ IIನೇ ರೆಗ್ಯುಲೇಷನ್ ಯಂಬ) 1863ನೇ ಇಸವಿಯ XVIನೇ ಆಕ್ಟಿನ ಪೇರಿಗೆ ಮನುಷ್ಯರು ಕುಡಿಯುವದಕ್ಕೆ ಲಾಯಿಕ್ ಯಿಲ್ಲದಂತೆ ಮಾಡಲ್ಪಟ್ಟ ಮೆಥಿಲೇಟೆಡ್ ಎ ಯಿಲ್ಲ ಸ್ಪಿರಿಟ್ ಸುರಾಮಿಯನ್ನೂ, ಸದರ ಆಕ್ಟಿನ ಪೆದ್ದೇಶಗಳಿಗಾಗಿ "ಒಳದೇಶದ ಸುರಾಯಿ" ಯಂತೆಯೇ ಯೆಣಿಸಲ್ಪಡತಕ್ಕದ್ದು.

ನಂ. 196.—ಇದರಡಿ ಕಂಡ ಗ್ರಾಮಗಳ ವರ್ಗಾವರ್ಗಿಯನ್ನು ಅಪ್ಪಣೆ ಮಾಡೋಣವಾಗಿರುತ್ತದೆ.

ನಂಬರ್.	ಮಾಗಣಿ.	ಗ್ರಾಮದ ಹೆಸರು.	ಯಾವ ತಾಲ್ಲೂಕಿನಿಂದ.	ಯಾವ ತಾಲ್ಲೂಕಿಗೆ ವರ್ಗ.
1	2	3	4	5
1	ವಕ್ಕಲೇರು	ಲಕ್ಷ್ಮೀಸಾಗರ	ಕೋಲಾರ	ಮಾಲೂರು
2	ದಳವನೂರು	ಧನಸಚಂಪನಕ್ಕೆ	ಡಿಟ್ಟೋ	ಚಿಂತಾಮಣಿ

ನಂ. 195.—ಕೋಲಾರ ತಾಲ್ಲೂಕು ಪೈಕಿ ಇದರಡಿ ಕಂಡ ತಪ್ಪೆಯಲ್ಲಿ ನಮೂದಾಗುವ ಗ್ರಾಮಗಳು ಅವುಗಳ ಆಜುಬಾಜು ಗ್ರಾಮಗಳಿಗೆ ಕೀರತಕ್ಕದ್ದೆಂದು ಯಿದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸೋಪಾಗಿರುತ್ತದೆ.

ಮಾಗಣಿ.	ನಂಬರ್.	ಕಾಯಂ ಇರತಕ್ಕ ಗ್ರಾಮಗಳು.	ನಂಬರ್.	3ನೇ ಮೇಸ್ತ್ರಿಕಿನಲ್ಲಿ ನಮೂದಾಗುವ ಗ್ರಾಮಗಳಿಗೆ ಕೀರಿಸಲ್ಪಡತಕ್ಕ ಗ್ರಾಮಗಳ ಹೆಸರು.
1	2	3	4	5
ಹೆತ್ತೂರು ..	1	ಹೊಟ್ಟಗನಹಳ್ಳಿ ..	1	ಅಗ್ರಹಾರದಿನ್ನೆ
	2	ಮೂಲಂದಹಳ್ಳಿ ..	1	ರಾಂಪುರದಿನ್ನೆ
	3	ಪಟ್ಣ ..	1	ಅಲಿಕುಂಟಿ
			2	ಚೀತಿಗುಟ್ಟಿ
	4	ತಿಪ್ಪನಂದ್ರ ..	1	ಹೊಸೂರು
ಹೊಲ್ಲೂರು ..	5	ಹೊಲ್ಲೂರು ..	1	ಸಾಂಬಾಪುರ
	6	ಚಿಕ್ಕಕುರಬರಹಳ್ಳಿ ..	1	ಕದರಕುಂಟಿ
	7	ಬಾಡೆರಿ ..	1	ಬೆಳಗೆನಹಳ್ಳಿ
	8	ದಾದಿರಡ್ಡಿಹಳ್ಳಿ ..	1	ಜಾಡೆರಯಿಂದ ಪ್ರತ್ಯೇಕಿಸಲ್ಪಟ್ಟಭಾಗ
ದಳಸನೂರು ..	9	ಯಿಡಹಳ್ಳಿ ..	1	ಕಾಳಿಪುರ
	10	ಕುಡುವನಹಳ್ಳಿ ..	1	ಚನ್ನಾಪುರ
ವಕ್ಕಲೇರಿ ..	11	ವಕ್ಕಲೇರಿ ..	1	ಗಂಗಾಪುರ
			2	ದಾಸರಹಳ್ಳಿ
	12	ಕೋಡಿಹಳ್ಳಿ ..	1	ಸೋಮೆನಹಳ್ಳಿ
	13	ತಿರುಮಲಕೊಪ್ಪ ..	1	ಬನವಾಪುರ
	14	ದೊಡ್ಡಹಾಯೂರು ..	1	ಲಕ್ಷ್ಮೀನಾರಾಯಣಪುರ
ಕೋಲಾರ ..	15	ಕುರುಬರಹಳ್ಳಿ ..	1	ಭೈರಡ್ಡಿಹಳ್ಳಿ
	16	ದೆಗಲಿಹೆಲಚನಹಳ್ಳಿ ..	1	ಶ್ರೀಕಾಂತಪುರ
ಸುಗಟೂರು ..	17	ಗೊಟ್ಟಹಳ್ಳಿ ..	1	ಬೂದಿಹಾಳ
	18	ಮಾದನಹಳ್ಳಿ ..	1	ಗಣೇಶಪುರ
	19	ಸೋಪಾಂಬುಧಿ ಅಮಾನೀಕೆರೆ ..	1	ಬೊಂತಿಗನಹಳ್ಳಿ
ವೇಮಗಲ್ಲು ..	20	ಮಾರಚನಹಳ್ಳಿ ..	1	ಈಜಗುರಕಿ
	21	ಈರಗನಂದ್ರ ..	1	ತಿಮ್ಮಾಪುರ
	22	ಚನ್ನಪ್ಪನಹಳ್ಳಿ ..	1	ಕುರಟುರಕಳ್ಳಿ
	23	ಕಮಂಡಹಳ್ಳಿ ..	1	ಹುಣಾಸೇನಹಳ್ಳಿ
	24	ಕಿಂಗಹಳ್ಳಿ ..	1	ಯಲುವಹಳ್ಳಿ
	25	ನಜ್ಜನಹಳ್ಳಿ ..	1	ಅಂಕೊಂಡನಹಳ್ಳಿ
	26	ಕೀತಿ ..	1	ಹೊನೂರು
			2	ಕಕವಿನಾಯಕನಹಳ್ಳಿ
	27	ಪುಲನಕಲ್ಲೂರು ..	1	ಹೊಲೇರಹಳ್ಳಿ
			2	ಸರ್ಕಾರಪರಜನಹಳ್ಳಿ
	28	ಪೆಟ್ಟಹಸಪುರ ..	1	ಹಳೇಹೊಸಪುರ
	29	ಕೃಷ್ಣಾಪುರ ..	1	ಅತ್ತೀಮರದದಿನ್ನೆ
	30	ಮಡಿವಾಳ ..	1	ಸುಲದೇನಹಳ್ಳಿ
	31	ಮಲ್ಲಯ್ಯಪ್ಪನಹಳ್ಳಿ ..	1	ಮಲ್ಲಯ್ಯಪ್ಪನಹಳ್ಳಿ ಅಮಾನೀಕೆರೆ
ಸುಗಟೂರು ..	32	ಬುಸನಹಳ್ಳಿ ..	1	ಕಿಂಗರಡ್ಡಿಹಳ್ಳಿ,

ತಾರೀಖು 20ನೇ ಸೆಪ್ಟಂಬರ್ 1889.

ನಂ. 197.—ಸ್ಯ 1870ನೇ ಇಸವಿ Xನೇ ನಂಬರ್ ಲ್ಯಾಂಡ್ ಅಕ್ವಿಜಿಷ್ ಆಕ್ಟಿನ 6ನೇ ಸೆಕ್ಷನ್ ಅನುಸರಿಸಿ, ಇದರಡಿಕೆಯಿಂದ ಪ್ರಕಟಪಡಿಸುವದೇನಂದರೆ, ಕೋಲಾರ ಡಿಸ್ಟ್ರಿಕ್ಟು ಪೈಕಿ ಚಿಕ್ಕಬಳ್ಳಾಪುರದ ಕಸಬೆಯಲ್ಲಿರುವ ಇದರಡಿಬರುವ ತಪ್ಪೆಯಲ್ಲಿ ನಮೂದಾಗುವ ಅಂಗಡಿಗಳು, ಖಾಲಿ ನಿವೇಶನಗಳು ವಗೈರೆಯು ಸರ್ಕಾರದ ಕೆಲಸಕ್ಕಾಗಿ ಬೇಕಾಗಿರುತ್ತದೆ.

ನಂಬರ.	ಇರತಕ್ಕ ಸ್ಥಳೇಶ.	ಮಾಲೀಕನ ಹೆಸರು.	ವಿಸ್ತೀರ್ಣ.		ವಿವರಣೆ.	ಯಾವ ಕೆಲಸಕ್ಕಾಗಿ ಬೇಕಾಗಿರುತ್ತೆ.	ಚಕ್ಕುಬಂದಿ.
			ಪೂರ್ವ ಪಶ್ಚಿಮ.	ಉತ್ತರ ದಕ್ಷಿಣ.			
			ಗಜ.	ಗಜ.			
1	ಪ್ಯಾಟೆ ಚವುಕದಲ್ಲಿ ಕೋದಂಡರಾಮಸ್ವಾಮಿ ಬ್ಯಾಂಕ್ ಇರುವ ಅಂಗಡಿ	ನಗರ್ತಪೇಟೆ ಕಟ್ಟಿ ಅಂಯ್ಯಪ್ಪ	9½	3	ತಕ್ತೆ ಪೋವ್ 6 ಅಂಕಣದ ಮಾಳಿಗೆ ಗೋಡೆ ವಗೈರೆ ಸುಟ್ಟ ಇಟ್ಟಿಗೆ ಸುಂಣದ ಕೆಲಸದ ಬಾಬತ್ತು	ದೊಡ್ಡಪೇಟೆ ಬೀದಿಯಿಂದ ಕೋಟೆಗೆ ರಸ್ತೆ ಹಾಕತಕ್ಕ ಬಗ್ಗೆ	ಪೂರ್ವಕ್ಕೆ—ನಗರ್ತಪೇಟೆ, ಪಶ್ಚಿಮಕ್ಕೆ—ದೊಡ್ಡಮುನಿಯಪ್ಪನಪಾಲಿ ನಿವೇಶನ, ಉತ್ತರಕ್ಕೆ—ಡಿಟೋ ಅಂಗಡಿ, ದಕ್ಷಿಣಕ್ಕೆ—ಡಿಟೋ ಅಂಗಡಿ
2	ಡಿಟೋ ಅಂಗಡಿಗೆ ಪೂರ್ತ ರ ಡಿಟೋ	ದೊಡ್ಡಮುನಿಯ	9½	[illegible]	ಜಂತೆ ಹಾಕಿದ 6 ಅಂಕಣ ಮಾಳಿಗೆ	ಡಿಟೋ ಡಿಟೋ	ಪೂರ್ವಕ್ಕೆ—ಪಬ್ಲಿಕ್ ರಸ್ತೆ—ಪಶ್ಚಿಮಕ್ಕೆ ದೊಡ್ಡಮುನಿಯಪ್ಪನ ಕಟ್ಟೆ—ಉತ್ತರಕ್ಕೆ ಹಳೇ ತಾಲ್ಲೂಕು ಕಚೇರಿ ಕಟ್ಟೆ—ದಕ್ಷಿಣಕ್ಕೆ ಅಂಣಯ್ಯಪ್ಪನ ಅಂಗಡಿ
3	ಡಿಟೋ ಅಂಗಡಿಗೆ ಹಿಂಭಾಗದಲ್ಲಿರುವ ಖಾಲೀ ಜಾಗಾ	ಡಿಟೋ	23	5½	ಖಾಲೀ ಜಾಗಾ	ಡಿಟೋ	ಪೂರ್ವಕ್ಕೆ—ದೊಡ್ಡಮುನಿಯಪ್ಪ ವ ಅಂಣಯ್ಯಪ್ಪನ ಅಂಗಡಿ—ಪಶ್ಚಿಮಕ್ಕೆ—ಹಳೇ ತಾಲ್ಲೂಕು ಕಚೇರೀ ಹಿತ್ತಲು—ಉತ್ತರಕ್ಕೆ—ಹಳೇ ತಾಲ್ಲೂಕು ಕಚೇರಿ—ದಕ್ಷಿಣಕ್ಕೆ—ದೊಡ್ಡಮುನಿಯಪ್ಪನ ಖಾಲೀ ನಿವೇಶನ
4	ಹಳೇ ತಾಲ್ಲೂಕು ಕಚ್ಚೇರಿ	ಕನ್ನಿಕಟ್ಟೆಪ್ಪನ ಪುಟ್ಟಣ	35—1	27¾	ಇದರಲ್ಲಿ ಭೂವಿ ವ ಅಂಗಳ ಇಧೆ ಸುಮಾರು 160 ಅಂಕಣನೆಳ್ಳ ಜಂಗ್ಲಿ ಸಾಮಾನು ಹಾಕಿದ ಮಂಣು ಮಾಳಿಗೆ ಮನೆ ಈ ವೈಕಿ 6 ಅಂಕಣಕ್ಕೆ ಹೆಂಚು ಹೊದಿಸಿ ಇದೆ 3 ಅಂಕಣ ಕಲ್ಲುಮಾಳಿಗೆ	ಡಿಟೋ ಮತ್ತು ಸ್ಕೂಲ್ ಕಟ್ಟಣಗಳನ್ನ ಕಟ್ಟತಕ್ಕ ಬಗ್ಗೆ	ಪೂರ್ವಕ್ಕೆ—ಸರ್ಕಾರ ಜಾಗಾ ಮತ್ತು ಅಪ್ಪಣ್ಣ ಕಟ್ಟೆ—ಪಶ್ಚಿಮಕ್ಕೆ—ಸರ್ಕಾರ ಖಾಲೀ ಜಾಗಾ—ಉತ್ತರಕ್ಕೆ ಪಬ್ಲಿಕ್ ರಸ್ತೆ—ದಕ್ಷಿಣಕ್ಕೆ—ದೊಡ್ಡಮುನಿಯಪ್ಪನ ಅಂಗಡಿ ವ ಖಾಲೀ ನಿವೇಶನ
5	ಹಳೇ ತಾಲ್ಲೂಕು ಕಚೇರಿಗೆ ಸೇರಿದ ಹಿತ್ತಲು	ಪುಟ್ಟಣ	21—2 10—0	2 5	ಖಾಲೀ ನಿವೇಶನ	ಸರ್ಕಾರ ಕೆಲಸಕ್ಕಾಗಿ	ಪೂರ್ವಕ್ಕೆ—ದೊಡ್ಡಮುನಿಯಪ್ಪನ ಖಾಲಿ ನಿವೇಶನ—ಪಶ್ಚಿಮಕ್ಕೆ—ಪಬ್ಲಿಕ್ ಜಾಗಾ—ಉತ್ತರಕ್ಕೆ—ಹಳೇ ತಾಲ್ಲೂಕು ಕಚೇರಿ ದಕ್ಷಿಣಕ್ಕೆ— ದೊಡ್ಡ ಮುನಿಯಪ್ಪನ ಜಾಗಾ

ನಂ. 200.– ಸ್ಯ 1878ನೇ ಇಸವಿಯ Iನೇ ಆಫೀಂ ಆಕ್ಟಿನ 14 ವ 22ನೇ ಸೆಕ್ಷಣಗಳನುಸರಿಸಿ, ಇದರಿಂದ ನಮೂದಾಗುವ ಆಫೀಸರಿಗಳು ಡಿಟೋ ಸೆಕ್ಷಣಗಳಲ್ಲಿ ನಮೂದಿಸುವ ಅಧಿಕಾರಗಳನ್ನು ಚಲಾಯಿಸತಕ್ಕದ್ದೆಂದು ಶ್ರೀಮನ್ಮಹಾರಾಜಾ ಸರ್ಕಾರದವರು ಇದರಿಂದ ಅಪ್ಪಣೆ ಕೊಡಿಸಿರುತ್ತಾರೆ.

ಎಕ್ಸೈಜ್ ಇಲಾಖೆಯಲ್ಲಿ.

ಅಸಿಸ್ಟೆಂಟ್ ಟಿಸ್ಟರ್ ವ ಅದಕ್ಕೆ ಮೇಲ್ಪಟ್ಟು ಹುದ್ದೆಯುಳ್ಳ ವ ಮಾಹೆಯಾನಾ 10 ರೂಪಾಯಿಗೆ ಕಮ್ಮಿ ಯಿಲ್ಲದ ತಲಬುಳ್ಳ ತಮಾಂ ಆಫಿಸರಿಗಳು.

ಪೊಲೀಸ್ ಇಲಾಖೆಯಲ್ಲಿ.

ಹೆಡ್ ಕಾನ್ಸ್ಟೇಬಿಲ್ ಯಾ ಜಮಾದಾರ್ ದರ್ಜೆಯ ವ ಅದಕ್ಕೆ ಮೇಲ್ಪಟ್ಟ ತಮಾಂ ಆಫಿಸರುಗಳು.

ರೆವಿನ್ಯೂ ಇಲಾಖೆಯಲ್ಲಿ.

ಕೇಕದಾರ ವ ಅದಕ್ಕೆ ಮೇಲ್ಪಟ್ಟ ಹುದ್ದೆಯ ತಮಾಂ ಆಫಿಸರುಗಳು.

ಮ್ಯುನಿಸಿಪಲ್, ಸಾಯರ್ ವ ಆಕ್ಟ್ರಾಯಿ ಇಲಾಖೆಗಳಲ್ಲಿ.

ದರೋಗಾ, ಮುಫ್ಸದ್ದಿ ಯಾ ಮಾಫೇಗಾರ್ ಈ ಹುದ್ದೆಗಳ ವ ಅದಕ್ಕೆ ಮೇಲ್ಪಟ್ಟು ಮಾಹೆಯಾನಾ 10 ರೂಪಾಯಿಗೆ ಕಮ್ಮಿಯಿಲ್ಲದ ತಲಬುಳ್ಳ ತಮಾಂ ಆಫಿಸರುಗಳು.

ತಾರೀಖು 21ನೇ ಸಪ್ಟಂಬರ್ 1889.

ನಂ. 201.—1886ನೇ ಇಸವಿಯ VIನೇ ಆಕ್ಟಿನಿಂದ ತಿದ್ದಪಾಟು ಮಾಡೋಣಾದ 1881ನೇ ಇಸವಿಯ XXIIನೇ ಯು ರಿಕ್ಸೈಜ್ ಆಕ್ಟಿನ 34 A ಸೆಕ್ಷನಿನ ದೆಸೆಯಿಂದ ಪುಟ್ಟಾದ ಅಧಿಕಾರವನ್ನ ಚಲಾಯಿಸುವದರಲ್ಲಿ ಶ್ರೀಮನ್ಮಹಾರಾಜಾ ಸರ್ಕಾರದವರು ಪೊಲೀಸ್ ಆಫಿಸರುಗಳಿಗೆ ಇದರಿಂದ ನಮೂದಾಗುವ ಅಧಿಕಾರಗಳನ್ನ ಇದರ ದೆಸೆಯಿಂದ ಕೊಟ್ಟಿರುತ್ತಾರೆ.

(a) (ತಮಾಂ ಪೊಲೀಸ್ ಆಫಿಸರುಗಳಿಗೆ)—ಸದರೀ ಆಕ್ಟಿನ 27ನೇ ಸೆಕ್ಷನಿನಿಂದ ಎಕ್ಸೈಜ್ ಆಫಿಸರುಗಳಿಗೆ ಕೊಡಲ್ಪಟ್ಟಿರುವ ಅಧಿಕಾರಗಳು.

(b) (ಸ್ಪೆಷ್ ಚಾರ್ಜಿನಲ್ಲಿರುವ ಪ್ರೊಬ್ಬ ಪೊಲೀಸ್ ಆಫಿಸರರಿಗೆ, ಅಥವಾ ಹೆಡ್ ಕಾನ್ಸ್ಟೇಬಿಲ್ ಯಾ ಜಮಾದಾರ್, ಯಾ ಸಾರ್ಜಂಟ್ ಯಾ ದಫೆದಾರ್ ಈ ಹುದ್ದೆವುಳ್ಳ ಯಾ ಅದಕ್ಕೆ ಮೇಲ್ಪಟ್ಟ ಹುದ್ದೆಯುಳ್ಳ ಪ್ರೊಬ್ಬ ಪೊಲೀಸ್ ಆಫಿಸರಿಗೆ)—ಸದರೀ ಆಕ್ಟಿನ 28 ವ 29ನೇ ಸೆಕ್ಷಣಗಳಿಂದ ಎಕ್ಸೈಜ್ ಆಫಿಸರಗಳಿಗೆ ಕೊಡಲ್ಪಟ್ಟಿರುವ ಅಧಿಕಾರಗಳು.

ತಾರೀಖು 21ನೇ ಸೆಪ್ಟಂಬರ್ 1889.

ನಂ. 198.—ಹಾಲಿ ಜಾರೀಲಿರುವ 1878ನೇ ಇಸವಿಯ ಫಾರೆಸ್ಟ್ ರೂಲ್ಸ್ ನಿಬಂಧನೆಗಳ 26ನೇ ಕಲಮನುಸರಿಸಿ ಏರ್ಪಡಿಸಲ್ಪಟ್ಟು ಇದರಿಂದ ಬರುವ ಉಪನಿಬಂಧನೆಗಳನ್ನ ಮಂಜೂರ್ಮಾಡಿ ಸರ್ವರಿಗೂ ತಿಳಿಯತಕ್ಕ ಬಗ್ಗೆ ಪ್ರಕಟವಡಿಸೋಣಾಗಿರುತ್ತದೆ.

1. ಯಾವದಾದರೊಂದು ಡಿಸ್ಟ್ರಿಕ್ಟ್ ಜಂಗ್ಲಿಯಲ್ಲಿ ಯಾ ಜಂಗಲಿನಿಂದ, ನಾಟೂ ವ ಚೌಬೀನೆಯನ್ನ ಕಡಿದು ಸಾಗಿಸತಕ್ಕ ಬಗ್ಯಾಗಲಿ, ಅಥವಾ ಇತರ ಜಂಗ್ಲೀ ವುತ್ಪತ್ತಿಯನ್ನ ಜಮಾಯಿ ಸಾಗಿಸತಕ್ಕ ಬಗ್ಯಾಗಲಿ, ಜೆಪ್ಯುಟಿ ಕಮ್ಮಿಷನರಾಗಲಿ, ಯಾ ಅಬಗ್ಯಾಗಿ ಅವ ರಿಂದ ಅಧಿಕಾರ ಹೊಂದಿದ ಯಿತರ ಆಫಿಸರಾಗಲಿ ಲೈಸೆನ್ಸಿಗಳನ್ನ ಕೊಡಬಹುದು ಲೈಸೆನ್ಸಿದಾರರು ಅಂಥಾ ಲೈಸೆನ್ಸಿಗಳಲ್ಲಿ ನಮೂದಾ ಗುವ ಷರತ್ತುಗಳನ್ನನುಸರಿಸಿ ನಡದುಕೊಳ್ಳಲಿಕ್ಕೆ ಬದ್ಧರಾಗಿರತಕ್ಕದ್ದು,

2. ಮೇದರುಗಳು ಡಿಸ್ಟ್ರಿಕ್ಟು ಜಂಗಲಿಗಳಲ್ಲಿ ಬಿದರನ್ನ ಪ್ರತಿ ದಫೆಯಲ್ಲೂ 20 ತಲೆಹೊರೆಗಳವರಿಗೂ ಕಡದು ಸಾಗಿಸತಕ್ಕ ಬಗ್ಯಾಗಿ ತಾಲ್ಲೂಕು ಅಮಲೆದಾರರು ಲೈಸೆನ್ಸಿ ಕೊಡಲಿಕ್ಕೆ ಅಧಿಕಾರ ವುಳ್ಳವರಾಗಿರುತ್ತಾರೆ. ಡಿಸ್ಟ್ರಿಕ್ಟು ಜಂಗ್ಲಿಗಳಲ್ಲಿ, ವರ್ತಕರಿಗೆ ವ ಯಿತರರಿಗೆ ಬೇಕಾಗುವಂಥಾ ಉಳಿಕೊಳ್ಳಲ್ಪಡದೇ ಯಿರುವಬಗೆ ನಾಟೂ ವ ಚೌಬೀನೆಯನ್ನ ಕಡಿದು ಸಾಗಸತಕ್ಕ ಬಗ್ಯೆ ನಾಟೂಗಳ ವಿಷಯದಲ್ಲಿ 10 ಭಂಡೀ ಲೋಜೆಗಳವರಿವಿಗೂನ್ನೂ, ಚೌಬೀನೇ ವಿಷಯದಲ್ಲಿ 20 ಭಂಡೀ ಲೋಜೆಗಳವರಿವಿಗೂನ್ನೂ ಅಮಲೆದಾರರು ಲೈಸೆನ್ಸಿ ಕೊಡಬಹುದು, ಈ ಜಾಸ್ತೀ ತೇದಾದಿಗಾಗಿ ಡಿಸ್ಟ್ರಿಕ್ಟು ಡೆಪ್ಯುಟಿಕಮ್ಮಿಷನರುಗಳು ಲೈಸೆನ್ಸಿಗಳನ್ನ ಕೊಡಬಹುದು.

3. ಯಾವ ಡಿಸ್ಟ್ರಿಕ್ಟು ಯಾ ತಾಲ್ಲೂಕಿನಲ್ಲಿ ನಾಟೂ ವ ಚೌಬೀನೆಗಳ ಪ್ರರೋಪರ್ಟ್ಬಗ್ಯೆ ಡಿಪೋಯಾನೇ ಕೋರ್ಟ ಇರುತ್ತದೆಯೋ, ಅಂಥಾ ಡಿಸ್ಟ್ರಿಕ್ಟು ಯಾ ತಾಲ್ಲೂಕಿನಲ್ಲಿ ಯಿರುವ ಯಾವ ಗವರ್ಮೆಂಟ್ ಜಂಗಲ್ ಯಾ ಜಮೀನಿನಲ್ಲಿ ಮರ ವ ಚೌಬೀನೆಯನ್ನ ಕಡಿದು ಸಾಗಿಸುವದಕ್ಕೆ ತೀರ್ವೆ ಪಾವತಿಯ ಲೈಸೆನ್ಸನ್ನ ಕೊಡಲಾವ್ಯಕವಿಲ್ಲವೆಂದು 1 ಫಾರೆಸ್ಟ್ ಇನ್ಸ್ಪೆಕ್ಟರ್ ಜನರಲ್‌ಯವರು ಜ ರೂರು ವುಂಟಾದಾಗ ಹುಕುಂ ಮಾಡಬಹುದು.

4. ಯಾವ ಡಿಸ್ಟ್ರಿಕ್ಟು ಯಾ ತಾಲ್ಲೂಕಿನಲ್ಲಿ ನಾಟೂ ಚೌಬೀನೆ ಯಾ ಇತರ ಜಂಗ್ಲಿ ಉತ್ಪತ್ತಿಗಳನ್ನ ಕಡಿದು ಸಾಗಿಸಲ್ಪಡಬೇ ಕಾಗುತ್ತೋ ಆ ಡಿಸ್ಟ್ರಿಕ್ಟು ಯಾ ತಾಲ್ಲೂಕು ಪ್ರಜಾನೆಯಲ್ಲಿ, ಅಂತಾ ನಾಟೂ ಯಾ ಚೌಬೀನೆ ಕಡಿದು ಸಾಗಿಸತಕ್ಕ ಬಗ್ಯಾಗಲಿ, ಇತರ

ಜಂಗ್ಲೀ ಫಸಲನ್ನ ಜಮಾಯಿಸಿ ಸಾಗಿಸತಕ್ಕ ಬಗ್ಯಾಗಲಿ. ಮೈಸೂರು ಗೆಜೆಟ್ಟಿನಲ್ಲಿ ಆಗಿಂವಾಗ್ಗೆ ಆದಕ್ಕಾಗಿ ವಿಧಿಸೋಣಾಗುವ ತೀರ್ವೆ ಮೊಬಲಗನ್ನ ಪಾವತೀಮಾಡಿ ಅಂತಾ ಲೈಸೆನ್ಸು ಕೊಡಲಿಕ್ಕೆ ಅಧಿಕಾರ ಹೊಂದಿದ ಆಫಿಸರಬಳಿ ಸದರೀ ಖಜಾನೆ ರೀದಿಯನ್ನ ಹಾಜರ್ ಮಾಡಿದ ಹೊರ್ತು ಯಾವ ಮನುಷ್ಯನಿಗೂ ಲೈಸೆನ್ಸು ಕೊಡಲ್ಪಡತಕ್ಕ್ ದ್ದಲ್ಲವು.

ಪರಂತು ಮೇಲ್ಕಂಡ 3 ನ 4ನೇ ಕಲಮುಗಳಲ್ಲಿ ವಿಧಿಸೋಣಾವ ನಿಬಂಧನೆಗಳ ದೆಸೆಯಿಂದ ಫಾರೆಸ್ಟು ರೂಲ್ಸಿನ 24ನೇ ಸೆಕ್ಷನ್ ವೇರಿಗೆ ರೈತರುಗಳಿಗುಂಟಾಗಿರುವ ಹಕ್ಕುಗಳಿಗೆ ರೂಲ್ಸಿನ 25ನೇ ಸೆಕ್ಷನ್ ಅನುಸರಿಸಿ ರದ್ದಾದ ಹೊರ್ತು ಬಾಧಕವುಂಟಾಗತಕ್ಕ್ ದ್ದಲ್ಲವು.

5. ಉಸ್ತವಾರಿ ಬಗ್ಯಾಗಿ ಸ್ಪೆಷಿಯಲ್ ಕೆಬ್ಬಂದಿ ಯಿಲ್ಲದೇ ಯಿರುವಂತಾ ಯಾವ ಡಿಸ್ಟ್ರಿಕ್ಟು ಫಾರೆಸ್ಟುಗಳ ವಿಷಯದಲ್ಲಾಗಲಿ ಅಂತಾ ಜಂಗ್ಲಿಯು ಯಾವ ಗ್ರಾಮದ ಸರಹದ್ದಿನೊಳಗೆ ಯಿದ್ದು ಲೈಸೆನ್ಸುದಾರನು ಲೈಸೆನ್ಸಿನ ಅಧಿಕಾರದ ಮೇಲೆ ನಾಟಾ, ಚಾಬೀನೆ ಯಾ ಇತರ ಜಂಗ್ಲೀ ಫಸಲುಗಳನ್ನ ಸಾಗಿಸುತ್ತಾನೋ ಆ ಗ್ರಾಮದ ಪಟೇಲನಬಳಿ, ತನಬೀಜ್ಯೆ ಅವುಗಳನ್ನ ಹಾಜರ್ ಮಾಡಲಿಕ್ಕೂ, ಮತ್ತು ಅಂತಾ ಲೈಸೆನ್ಸಿನಲ್ಲಿ ನಮೂದಾಗಿರುವ ತೇದಾದು ಸರಿಯಾಗಿ ಯಿವೆಯಂದು ಪಟೇಲನ ಷರಾ ಪಡೆಯಲಿಕ್ಕೂ, ಲೈಸೆನ್ಸುದಾರನು ಬದ್ಧನಾಗಿರತಕ್ಕ್ ದ್ದು. ವುಸ್ತವಾರಿ ಬಗ್ಯಾಗಿ ಸ್ಪೆಷಿಯಲ್ ಕೆಬ್ಬಂದಿ ಯಿರುವಂತಾ ಯಾವ ಡಿಸ್ಟ್ರಿಕ್ಟು ಫಾರೆಸ್ಟು ವಿಷಯದಲ್ಲಾಗಲಿ, ಲೈಸೆನ್ಸುದಾರನು ಜಂಗಲ್‌ನಲ್ಲಿ ಪ್ರವೇಶ ಮಾಡಲಿಕ್ಕೆ ಮುಂಚಿತವಾಗಿಯೇ ಅಂತಾ ಫಾರೆಸ್ಟು ಚಾರ್ಜಿನಲ್ಲಿರುವ ವುದ್ಯೋಗಸ್ತನಿಗೆ ಲೈಸೆನ್ಸನ್ನ ತೋರಿಸತಕ್ಕ್ ದ್ದಲ್ಲದೆ ಆ ಫಾರೆಸ್ಟಿನೊಳಗಣ ನಾಟಾ ಯಾ ಚಾಬೀನೆ ಯಾ ಜಂಗ್ಲೀ ವುತ್ಪತ್ತಿಗಳನ್ನ ಕಡಿದ ತರುವಾಯ ಸಾಗಿಸುವದಕ್ಕೆ ಮುಂಚಿತವಾಗಿ ಅವುಗಳನ್ನ ತನಬೀಜಮಾಡಿಸಬೇಕಾದ್ದಲ್ಲದೆ ಮೇಆ ಪೇಳೋಣಾದ ಮೇರಿಗೆ ಲೈಸೆನ್ಸಿನಲ್ಲಿ ಷರಾ ಪಡೆಯತಕ್ಕ್ ದ್ದು.

6. ನಾಟಾ ಯಾ ಬಿದರು ಅಥವಾ ಮತ್ಯಾವ ಇತರ ಫಾರೆಸ್ಟು ಉತ್ಪತ್ತಿಯಾಗಲಿ ಅವು ತಲಪಬೇಕಾದ ಸ್ಥಳ ಕೀರಿದ ತರುವಾಯ ಅಥವಾ ಅಂಥಾ ನಾಟಾ ಯಾ ಬಿದರು ಅಥವಾ ಇತರ ಫಾರೆಸ್ಟು ಉತ್ಪತ್ತಿಯನ್ನ ಸಾಗಿಸುವ ಬಗ್ಯಾಗಿ ಲೈಸೆನ್ಸಿನಲ್ಲಿ ನಮೂದಾವ ವಾಯಿದೆ ಆಬೈರ್ ವಳಗಾಗಿ (ಈ ಯರಹರ ಪೈಕಿ ಯಾವದು ಮೊದಲು ಸಂಭವಿಸಿದಾಗ್ಯೂ ಸರಿಯೇ), ಲೈಸೆನ್ಸುದಾರನು ಸದರೀ ಲೈಸೆನ್ಸನ್ನು ಅದು ಕೊಟ್ಟಂಥಾ ಆಫಿಸರಿಗಾಗಲಿ ಅಥವಾ ಅಂಥಾ ನಾಟಾ, ಯಾ ಬಿದರು ಅಥವಾ ಇತರ ಫಾರೆಸ್ಟು ಹುಟ್ಟುವಳಿಯು ಸಾಗಿಸಲ್ಪಟ್ಟಂಥಾ ಯಾ ಸಾಗಿಸಲ್ಪಡಲಿಕ್ಕೆ ಉದ್ದೇಶಿಸಲ್ಪಟ್ಟಂಥಾ ತಾಲ್ಲೂಕಿನ ಅಮಲ್ದಾರರಿಗಾಗಲಿ ಯಾ ಅದನ್ನ ತೆಗವುಕೊಳ್ಳುವದಕ್ಕೆ ಮೊಕರರ್ ಮಾಡಲ್ಪಟ್ಟ ಮತ್ಯಾವ ನೌಕರರಿಗಾಗಲಿ ಒಪ್ಪಿಸತಕ್ಕ್ ದ್ದು. ಮತ್ತು ಅಂಥಾ ನಾಟಾ, ಬಿದರು ಯಾ ಇತರ ಫಾರೆಸ್ಟು ಹುಟ್ಟುವಳಿಯು ಕುಂಪಣಿ ಕೀನೆಗೆ ಸಾಗಿಸಲ್ಪಟ್ಟ್ಯಾಗ ಸದರೀ ಲೈಸೆನ್ಸ್ ಅದರಲ್ಲಿ ಸಮೂದ್ ಮಾಡಲ್ಪಟ್ಟಿಂತೆ ಸರಹದ್ದಿನಲ್ಲಿನ ಪಟೇಲನಿಗಾಗಲಿ ಸಾಯುಕ್ ಈಟ್ಟೆ ಉದ್ಯೋಗಸ್ಥನಿಗಾಗಲಿ ಅಥವಾ ಇತರ ಫಾಣೆ ಉದ್ಯೋಗಸ್ಥನಿಗಾಗಲಿ ಒಪ್ಪಿಸಲ್ಪಡತಕ್ಕ್ ದ್ದು: ಸದರೀ ಉದ್ಯೋಗಸ್ಥನು ತರುವಾಯ ಸದರೀ ಲೈಸೆನ್ಸ್ ಪ್ರಕಾರ ತೇದಾದು ಸರಿಯಾಗಿ ಯಿರುತ್ತೆಂದು ಷರಾ ಬರೆದು ಅದನ್ನು ಕೊಟ್ಟ ಆಫಿಸರಿಗೆ ಕಳುಹಿಸತಕ್ಕ್ ದ್ದು ಯಾ ತನ್ನ ತಾಲ್ಲೂಕು ಅಮಲ್ದಾರರ ದ್ವಾರಾ ರವಾನಿಸತಕ್ಕ್ ದ್ದು. ಲೈಸೆನ್ಸಿನಲ್ಲಿ ನಮೂದ್ ಮಾಡಲ್ಪಟ್ಟದ್ದಕ್ಕಿಂತಲೂ ಜಾಸ್ತೀ ತೇದಾದು ಸಾಗಿಸಲ್ಪಟ್ಟ್ಯಾಗ ಲೈಸೆನ್ಸನ್ನ ಒಪ್ಪಿಸಿಕೊಳ್ಳುವಂಥಾ ಆಫಿಸರನು, ತಾನು ವಜ್ಜ ಮಾಜಿಸ್ಟ್ರೇಟನಲ್ಲದ ಪಕ್ಷಕ್ಕೆ ಸದರೀ ಲೈಸೆನ್ಸುದಾರನನ್ನು ವಜ್ಜ ಮಾಜಿಸ್ಟ್ರೇಟರ ಮುಂದೆ ವಿಚಾರಣೆ ಬಗ್ಯೆ ಕೂಡ್ಲೆ ಹಾಜರ್ಮಾಡತಕ್ಕ್ ದ್ದಲ್ಲದೆ ಆ ಸಂಗತಿಯನ್ನು ಲೈಸೆನ್ಸು ಕೊಟ್ಟಂಥಾ ಆಫಿಸರಿಗೆ ತಿಳಿಸತಕ್ಕ್ ದ್ದು.

7. ಮೇಲ್ಕಂಡ ವಾಯಿದೆ ಮುಗಿಯುವದರ ವಳಗಾಗಿ, ಸದರೀ ನಾಟಾ, ಬೊಂಬು ಅಥವಾ ಮತ್ಯಾವ ಫಾರೆಸ್ಟು ಹುಟ್ಟುವಳಿಯಾದರೂ ಲೈಸೆನ್ಸು ಪ್ರಕಾರ ಕತ್ತರಿಸಲ್ಪಡದೇ ಜಮಾಯಿಸಲ್ಪಡದೇ ಯಾ ಸಾಗಿಸಲ್ಪಡದೆ ಯಿದ್ದರೆ ಸದರೀ ಲೈಸೆನ್ಸು ರದ್ದು ಮಾಡಲ್ಪಟ್ಟಿಂತೆ ಭಾವಿಸಲ್ಪಡತಕ್ಕ್ ದ್ದು: ಮತ್ತು ಅವು ತರ್ಜರಿಸಿ ದಾ ಜಮಾಯಿಸಲ್ಪಟ್ಟು ಪರಂತು ಆ ಬಗ್ಯಾಗಿ ಕೊಡಲ್ಪಟ್ಟ ವಾಯಿದೆ ವಳಗಾಗಿ ಅದು ತಲಪಬೇಕಾದ ಸ್ಥಳಕ್ಕೆ ಸಾಗಿಸಲ್ಪಡದೇ ಯಿದ್ದರೆ, ಲೈಸೆನ್ಸುದಾರನು ಲೈಸೆನ್ಸನ್ನ ವಾಪಸ್ ಮಾಡಿ ಲೈಸೆನ್ಸು ಫೀ ವೈಗೆ ನಾಲ್ಕರಲ್ಲಿ ಒಂದುಭಾಗಕ್ಕೆ ಸಮನಾದ ಮೊಬಲಗನ್ನು ಜುರ್ಮಾನೇ ತರೀಕ ಪಾವತಿ ಮಾಡಿದ ತರುವಾಯ ಫಾರೆಸ್ಟು ರೂಲಿನ 34ನೇ ಸೆಕ್ಷನ್ ಅನುಸರಿಸಿ ಒಂದು ಪರ್ಮಿಟ್‌ಯಾನೇ ರಹದಾರಿ ಪಡೆಯುವ ಬಗ್ಯೆ ಅರ್ಜಿ ನಾಗಿರತಕ್ಕ್ ದ್ದು, ಪರಂತು ಲೈಸೆನ್ಸುದಾರನು, ಸಾಗಿಸದೇ ನಿಂತ ಬಗ್ಯೆ ಅವಿಚ್ಛಿನ್ನವಾದ ಭಾರಿ ಮಳೆ, ನದಿಗಳು ಕಟ್ಟಿಕೊಳುವಣ ಯಾ ಭಂಡಿಗಳು ಸಿಕ್ಕದೆ ಯಿರುವಣ ಅಥವಾ ದಾರಿಯಲ್ಲಿ ಮತ್ಯಾವದರೂ ಅಕಸ್ಮಾತ್ತು ಯಿವೆ ಮೊದಲಾದ ಅಸಾಧ್ಯವಾದ ಆಡಚಣೆ ಸಂಭವಿಸಿತೆಂದು ಪ್ರೂಫ್ ಕೊಡತಕ್ಕ್ ದ್ದಂಥಾ ಆಫಿಸರಿಗೆ ತೃಪ್ತಿಕರವಾಗಿ ರುಜುವಾತ್ ಮಾಡಿಕೊಟ್ಟ ಪಕ್ಷದಲ್ಲಿ ಅವನು ಅದನ್ನ ಸಾಗಿಸುವ ಬಗ್ಯಾಗಿ ಮುಫೀ ರಹದಾರಿಯನ್ನ ಪಡೆಯುವ ಬಗ್ಯೆ ಅರ್ಜಿ ನಾಗಿರತಕ್ಕ್ ದ್ದು. ಫಾರೆಸ್ಟು ಹುಟ್ಟುವಳಿಯಿಂದ ಭರ್ತಿಮಾಡಲ್ಪಟ್ಟ ತಮಾಂ ಭಂಡಿಗಳೂ, ಫಾರೆಸ್ಟು ರೂಲಿನ 34ನೇ ಸೆಕ್ಷನ್ ನಿಯಮಗಳನುಸರಿಸಿ ಯಾವದಾದರೂ ಪೋಲೀಸ್, ರೆವಿನ್ಯೂ ಯಾ ಫಾರೆಸ್ಟು ಆಫಿಸರಿಂದಾದರೂ ಅಜಮಾಯಿಷೀ ಮಾಡಲ್ಪಡಲಿಕ್ಕೆ ಬಳಪಟ್ಟಿರತಕ್ಕ್ ದ್ದು.

8. ಒಬವ ಲೈಸೆನ್ಸಿಗೆ ಸಂಬಂಧಪಟ್ಟ ತಮಾಂ ನಾಟಾ, ಬಿದರು ದಾ ಇತರ ಫಾರೆಸ್ಟು ಹುಟ್ಟುವಳಿಯು ಬಂದೇ ಲಾಟಾಗಿ ಯೀತ ಕಾಲದಲ್ಲಿಯೇ ಸಾಗಿಸಲ್ಪಡದೇಕಲ್ಲದೆ ಅದರ ಜೊತೆಯಲ್ಲಿ ಲೈಸೆನ್ಸು ಸುದಾ ಯಿರತಕ್ಕ್ ದ್ದು; ಪರಂತು ಸರಕಾರದಿಂದ ಗುತ್ತಿಗ್ಯೆ ಪಡಕೊಂಡಂಥಾ ಗುತ್ತಿಗೆದಾರರಿಂದ ಅಂಥಾ ಗುತ್ತಿಗೆ ವಾಯಿದೆ ವಳಗೆ ಗುತ್ತಿಗೆ ಪರತ್ತುಗಳನುಸರಿಸಿ ಅವರಿಂದಲಾಗಲಿ ಅವರ ನೌಕರರಿಂದಲಾಗಲಿ ಸಾಗಿಸಲ್ಪಡುವಂಥಾ ಗೋಂದು ಧೂಪ ಅರಗು, ಜೇನುಮೇಣ, ಹುಣಕೇ ಹಂಣು ಯಿವೇ ಮೊದಲಾವ ಫಾರೆಸ್ಟು ಚಿಲ್ಲರೇ ಹುಟ್ಟುವಳೇ ಜವಾವಣೆ ಬಗ್ಯೆ ಈ ರೂಲ್ಸ್ ಅನ್ವಯಿಸತಕ್ಕ್ ದ್ದಲ್ಲವು, ಪರಂತು ಅಂಥಾ ಗುತ್ತಿಗೆದಾರರು ಅಂಥಾ ಫಾರೆಸ್ಟು ಚಿಲ್ಲರೇ ಪುಟ್ಟುವಳೇ ವಿಷಯದಲ್ಲಿ ಅವರ ಕಂಟ್ರಾಕ್ಟಿನ ನಿಬಂಧನೆಗಳಿಗೆ ಬದ್ಧರಾಗಿ ನಡೆದು ಕೊಳ್ಳತಕ್ಕ್ ದ್ದು. ತಪ್ಪಿದಲ್ಲಿ ಆದಕ್ಕಾಗಿ ವಿಶೇಷತಃ ವಿಧಿಸೋಣ್ಯ ದಂಥಾ ಅಥವಾ ಫಾರೆಸ್ಟು ರೂಲ್ಸಿನ 40ನೇ ಸೆಕ್ಷನಿನಲ್ಲಿ ವಿವರಿಸಲ್ಪಟ್ಟಂಥಾ ದಂಡಗಳಿಗೆ ಗುರಿಯಾಗಿರತಕ್ಕ್ ದ್ದು.

ತಾರೀಖು 21ನೇ ಡಿಕಂಬರ್ 1888.

ಕಾರ್ಯಾರ್ಥ ದಿವಾನರವರನ್ನು, ಭೇಟಿ ಮಾಡುವದಕ್ಕೆ ಅಪೇಕ್ಷಿಸುವ ದೊಡ್ಡ ಮನುಷ್ಯರು ಶುಕ್ರವಾರಗಳಲ್ಲಿ ಮಧ್ಯಾನ್ಹಾತ್ಪರ 2 ಘಂಟೆಗೆ ಕಛೇರಿಗೆ ಬರತಕ್ಕದ್ದು. ಈ ಬಗ್ಯಾಗಿ ಹಿಂದಿನ ದಿನ ಚೀಫ್ ಸೆಕ್ರಟೆರಿಯವರಿಗೆ ತಮ್ಮ ಕಾರ್ಡಗಳನ್ನು ಕಳುಹಿಸತಕ್ಕದ್ದು.

2. ಬೆಂಗಳೂರು ಆಫಿಸಿನಲ್ಲಿ ಯಿಡಲ್ಪಟ್ಟಿರುವ ಅರ್ಜಿಪೆಟ್ಟಿಗೆಯು ದಿನವಹೀ ಚೀಫ್ ಸೆಕ್ರಟೆರಿಯವರಿಂದಲೂ, ಅವರು ಬೆಂಗಳೂರಲ್ಲಿ ಯಿಲ್ಲದ ಕಾಲದಲ್ಲಿ ಅಂಡರ್ ಸೆಕ್ರಟೆರಿಯವರಿಂದಲೂ ಮಧ್ಯಾನ್ಹ 12 ಘಂಟೆಗೆ ತೆಗಿಯಲ್ಪಟ್ಟು ಅದರಲ್ಲಿನ ಅರ್ಜಿಗಳು ತಗದುಕೊಳ್ಳಲ್ಪಡುವದು.

3. ಅರ್ಜೀದಾರರುಗಳು ಶುಕ್ರವಾರ ದಿವಸ ಮಧ್ಯಾನ್ಹಾತ್ಪರ 3 ಘಂಟೆಗೆ ಕಛೇರಿಯಲ್ಲಿ ಕೇಳಲ್ಪಡುವರು.

ಜೆ. ಪೋಜೀಬ್ ಹುಕುಂ,
ಆರ್. ವಿಜಯೀಂದ್ರರಾವ್,
ಚೀಫ್ ಸೆಕ್ರಟೆರಿ.

ದಿವಾನರವರು, ಅವರ ಭೇಟಿ ಮಾಡಲಿಚ್ಛೈಯುಳ್ಳ ದೊಡ್ಡ ಮನುಷ್ಯರುಗಳನ್ನು ಪ್ರತಿ ಶನಿವಾರದ ದಿವಸ ಮಧ್ಯಾನ್ಹ 12 ಘಂಟೇ ಲಾಗಾಯತು 2 ಘಂಟೆ ಪರಿಯಂತ ತಮ್ಮ ವಾಸಸ್ಥಾನದಲ್ಲಿ ಬರಮಾಡಿಕೊಳ್ಳುವರು.

ನೇಟಿವ ದೊಡ್ಡ ಮನುಷ್ಯರುಗಳು ಆವರಿಗೆ ಯಿಷ್ಟವಿರುವ ಪಕ್ಷಕ್ಕೆ ಅದೇ ದಿವಸ ಮಧ್ಯಾನ್ಹಾತ್ಪರ 3 ಘಂಟೆಗೆ ಬರಬಹುದು.

ಕೆ. ದೊರಸಾಮಿಅಯ್ಯರ್,
ಪ್ರೈವೆಟ್ ಸೆಕ್ರಟೆರಿ.